ತೇಜಸ್ವಿಯವರ ಬರಹಗಳು ಓದುಗರಿಗೆ ನಮ್ಮ ಸುತ್ತಮುತ್ತಲಿನ ನೆಲ, ನೀರು, ಗಾಳಿ, ಪ್ರಾಣಿ, ಕ್ರಿಮಿಕೀಟ, ಸಸ್ಯಗಳನ್ನು ವಿನೂತನ ದೃಷ್ಟಿಯಿಂದ ಪರಿಭಾವಿಸುವ ರೀತಿಯನ್ನು ಹೇಳುತ್ತವೆ. ಇದುವರೆಗೆ ಕಾಡುಮೇಡು, ಸಸ್ಯ, ಪ್ರಾಣಿ ಇವೆಲ್ಲವನ್ನು ಒಬ್ಬ ನೋಡುಗನಾಗಿ ನೋಡುತ್ತಿದ್ದೇನೆ ಎಂಬ ಭಾವವಿತ್ತು. ಆದರೆ, ತೇಜಸ್ವಿಯವರ ಬರಹಗಳು ಓದುಗನಿಗೆ ನೀನೂ ಸಹ ಈ ಪರಿಸರದ ಒಂದು ಭಾಗ ಎಂಬ ಅರಿವನ್ನು ಕೊಟ್ಟಿದ್ದು ಅಪೂರ್ವ ಸಂಗತಿಯಾಗಿದೆ. ಅದುವರೆಗೆ ಕೆರೆ ಕುಂಟೆಗಳನ್ನು ನೀರಿನ ಆಶ್ರಯ ಎಂದುಕೊಂಡಿದ್ದ ನಮಗೆ ಇದರೊಳಗೆ ಜಲಚರಗಳಿವೆ, ಜಲಸಸ್ಯಗಳಿವೆ, ಇಲ್ಲೇನೊ ಜೀವ ಸಂಚಲನ ನಡೆಯುತ್ತಿದೆ ಎಂಬ ಅರಿವು ಉಂಟಾಗಿ ಅನುಭವಿಸಿದ ರೋಮಾಂಚನ ಅದ್ಭುತ!

ಅನೇಕ ಬಾರಿ ಅಡುಗೆ ಮನೆಯಲ್ಲಿರುತ್ತಿದ್ದ ನಮ್ಮನ್ನು, 'ಗೂಸ್ಲುಗಳಾ ಬನ್ನಿ! ಅಡುಗೆ ಅಲ್ಲಿಯೇ ಇರುತ್ತೆ ಬನ್ನಿ' ಎಂದು ತಮ್ಮ ಮಾತುಕತೆಗೆ ಸೇರಿಸಿಕೊಳ್ಳುತ್ತಿದ್ದರು. ಹೀಗೊಮ್ಮೆ ನಾನು 'ಕಾನೂರು ಹೆಗ್ಗಡಿತಿ' ಕಾದಂಬರಿ ಮಾದರಿಯ ಗದ್ಯದಲ್ಲಿ ಒಂದು ಕಾದಂಬರಿ ಬರೆಯಲು ಸಾಧ್ಯವೆ?' ಎಂದು ಪ್ರಶ್ನಿಸಿದಾಗ ಆ ರೀತಿಯ ಬರವಣಿಗೆಯ ಅಗತ್ಯ ಈಗಿಲ್ಲ. ಅದು ಆ ಕಾಲದ ಕತೆ ಮತ್ತು ಬರವಣಿಗೆ; ಆ ಲೇಖಕನ ಅಭಿವ್ಯಕ್ತಿ ವಿಧಾನದಿಂದಾಗಿ ಆ ಗದ್ಯ ಸೃಷ್ಟಿಯಾಯ್ತು. ಈ ಕಾಲದ ಬರವಣಿಗೆ, ಈಗಿನ ಗದ್ಯ ಕಾಲಧರ್ಮಕ್ಕೆ ತಕ್ಕಂತೆ ಬೇರೆಯ ರೀತಿಯದೇ ಆಗಿರಬೇಕೆಂಬ ತಿಳಿವಳಿಕೆ ಅವರಿಂದ ನಮಗೆ ಸಿಕ್ಕಿತು.

ಮತ್ತೊಮ್ಮೆ ನಾವು ತೇಜಸ್ವಿಯವರನ್ನ 'ರೈಟರ್ಸ್ ಬ್ಲಾಕ್' (**Writer's Block**) ಬಗ್ಗೆ ಕೇಳಿದಾಗ, 'ಒಬ್ಬ ಸೃಜನಶೀಲ ಲೇಖಕನ ಸೃಷ್ಟಿಶೀಲ ಒರತೆ ಬತ್ತಿದಾಗ, ಆ ಲೇಖಕ ಬೇರೆಬೇರೆ ಉತ್ತಮ ಲೇಖಕರ ಕೃತಿಗಳನ್ನು ಅನುವಾದಿಸುವ ಕೆಲಸ ಮಾಡುತ್ತಾನೆ' ಎಂದಿದ್ದರು.

ತೇಜಸ್ವಿ, ರಾಜೇಶ್ವರಿಯವರ ಸಂಗಡ ನಾವು ಕುಪ್ಪಳಿಗೆ ಹೋಗಿದ್ದಾಗ ತೀರ್ಥಹಳ್ಳಿಯ ಮಹಿಳಾ ಸಂಘದ ಸದಸ್ಯರು ತೇಜಸ್ವಿಗೆ ತಮ್ಮ ಸಂಘಕ್ಕೆ ಭೇಟಿ ಕೊಡಲೇಬೇಕೆಂದು ಒತ್ತಾಯಿಸಿದರು. ಅಲ್ಲಿ ಅವರು ತೇಜಸ್ವಿಯವರನ್ನ ನಮಗೆ ಕೆಲವು ಹಿತವಚನಗಳನ್ನು ಹೇಳಿ ಎಂದು ಕೇಳಿಕೊಂಡರು. ತೇಜಸ್ವಿ ಒಂದು ಘಳಿಗೆ ಸುಮ್ಮನೆ ನಿಂತು ಬಿಟ್ಟರು. 'ನಾನು ಕೆಲವು ಘಟನೆಗಳನ್ನು ರೂಪಕದ ಮೂಲಕ ಹೇಳ್ತೀನಿ' ಎಂದವರು, 'ನಾನು ಕಿರಗೂರಿನ ಗಯ್ಯಾಳಿ ಕಥಾಸಂಕಲನದ ಮುಖಪುಟದ ಚಿತ್ರಕ್ಕಾಗಿ ಕೈಲಿ ದೊಣ್ಣೆ ಹಿಡಿದ ಕೋಪಿಷ್ಠ ಹೆಂಗಸಿನ ಚಿತ್ರವನ್ನು ರಚಿಸುತ್ತಿದ್ದೆ. ಆಗ ಆ ಹೆಂಗಸಿನ ಮುಖದಲ್ಲಿ ಕೋಪದ ಭಾವ ಬರಲೇ ಇಲ್ಲ. ಆಗ ಅಲ್ಲಿಗೆ ಬಂದ ನಮ್ಮ ಕಲಾವಿದ ಕೆ.ಟಿ. ಶಿವಪ್ರಸಾದ್ ಅದೇ ಚಿತ್ರಕ್ಕೆ ಹುಬ್ಬು ಗಂಟಿಕ್ಕಿಸಿ, ತುಟಿ ಸೊಟ್ಟಗೆ ಚಿತ್ರಿಸಿದಾಗ ಆದ ಬದಲಾವಣೆ ಅದ್ಭುತ. ಅದೊಂದು ಸಿಟ್ಟಿಗೆದ್ದ ಹೆಂಗಸಿನ ಚಿತ್ರವಾಯ್ತು. ಇನ್ನೊಂದು ಸಲ ಮಲಗಿರುವ ಹೆಂಗಸಿನ ಚಿತ್ರ ಬರೆಯಲು ಯತ್ನಿಸಿದಾಗ ಅದು ಒಂದು ಮಾಂಸದ ಮುದ್ದೆಯಂತೆ ಕಾಣತೊಡಗಿತು. ಆಗಲೂ ಶಿವಪ್ರಸಾದ್ ಭೇಟಿ ಕೊಟ್ಟರು. ಆ ಮುದ್ದೆಯ ಮಧ್ಯದಲ್ಲಿ ಅಡ್ಡಲಾಗಿ ಒಂದು ಗೆರೆ ಹಾಕಿದಾಗ ಅದೊಂದು ಬೆನ್ನು ತೋರಿಸುತ್ತ ಮಲಗಿರುವ ಹೆಂಗಸಿನ ಚಿತ್ರವಾಯ್ತು. 'ನನಗೆ ಸ್ತ್ರೀ ಎಂದರೆ ನಿಗೂಢ' ಎಂದು ಮಾತು ಮುಗಿಸಿದರು. ಲೋಹಿಯಾ ಅವರ ವಿಚಾರಗಳಿಂದ ತೇಜಸ್ವಿ ಪ್ರಭಾವಿತರಾದವರು. ಲೋಹಿಯಾ, **'God and woman are two purposes of life. I have not seen god and woman is still elusive'** ಎಂದು ಹೇಳಿದ ಮಾತಿನ ಪ್ರಭಾವ ತೇಜಸ್ವಿಯವರ ಮೇಲೆ ಇತ್ತೆಂದು ಕಾಣುತ್ತದೆ ಎಂದು ಶ್ರೀರಾಮ್ ನಮಗೆ ಹೇಳಿದರು.

ನಮ್ಮ ಭಾಷೆಯ ಬಗ್ಗೆ ತೇಜಸ್ವಿಯವರಿಗಿದ್ದ ಆಸಕ್ತಿ, ಕುತೂಹಲ, ಪ್ರೀತಿಗಳ ಬಗ್ಗೆ ನಿದರ್ಶನವಾಗಿ ಒಂದು ಪ್ರಸಂಗ ನೆನಪಾಗುತ್ತಿದೆ. ಕುಪ್ಪಳಿಯಲ್ಲಿ ಕುವೆಂಪು ಸಾಹಿತ್ಯೋತ್ಸವ ನಡೆದಾಗ ಕೋಲಾರದ ಮೇಷ್ಟ್ರು ಮತ್ತು ಸಾಹಿತಿ ಸ. ರಘುನಾಥರೊಡನೆ ನಡೆದ ಸಂಭಾಷಣೆಯಲ್ಲಿ ಕರ್ನಾಟಕದ ವಿವಿಧ